## ಅಧ್ಯಾಯ : ಒಂದು chapter-1

# ಅಧ್ಯಯನದ ಉದ್ದೇಶ, ವಿಧಾನ ಹಾಗೂ ವ್ಯಾಪ್ತಿ

ಇತ್ತೀಚೆಗೆ ಜಾನಪದ ಅಧ್ಯಯನವು ಗಂಭೀರವೂ, ಜನಪ್ರಿಯವೂ ಆಗುತ್ತಲಿದೆ. ಅನ್ಯಜ್ಞಾನ ಶಿಸ್ತುಗಳ ಮೂಲಕ ಚಲಿಸುತ್ತಿರುವ ಅಧ್ಯಯನಗಳು ಕೂಡಾ ಜಾನಪದ ವಿದ್ವತ್ತಿನ ಬಗೆಗಿನ ನಮ್ಮೆಲ್ಲರ ಅರಿವನ್ನು ತುಂಬಿ ತುಳುಕಿಸುತ್ತಲಿವೆ. ಜಾನಪದವನ್ನು ಅದರ ಸಾಹಿತ್ಯಿಕ ಶಕ್ತಿಯ ಮುಖಾಂತರ ನೋಡುವ ಸಾಂಪ್ರದಾಯಿಕ ಕ್ರಮ ಈಗ ಹಳಿ ತಪ್ಪಿದ ರೈಲಿನಂತಾಗಿದೆ. ಅದರ ಬದಲಾಗಿ ನಿರ್ದಿಷ್ಟವಾದ ಸಮುದಾಯ ಅಥವಾ ಒಂದು ಸಮಾಜವನ್ನು ಸಮಗ್ರ ಚೌಕಟ್ಟಿನಲ್ಲಿರಿಸಿಕೊಂಡು ಜಾನಪದವನ್ನು ಅಧ್ಯಯನ ಮಾಡುವ ಪ್ರವೃತ್ತಿ, ಹವ್ಯಾಸ ಇತ್ತೀಚೆಗೆ ಕಂಡುಬರುತ್ತಿದೆ. ಪೂರ್ವದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆಗೆ ಮಾತ್ರ ಅವಲಂಬಿತವಾಗಿದ್ದ ಸಂಶೋಧನಾ ಕ್ಷೇತ್ರ ಇಂದು ಜಾನಪದದ ಸಂಗ್ರಹಿತ ವಸ್ತುವನ್ನು ವಿಧವಿಧವಾದ ಅಧ್ಯಯನ ಶಿಸ್ತುಗಳ ಮೂಲಕ ಅರ್ಥೈಸುವ, ವಿಶ್ಲೇಷಿಸುವ ದಿಕ್ಕಿನೆಡೆಗೆ ಮುಖ ಚಾಚಿದೆ. ಇದರೊಂದಗೆ ಜಾನಪದವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ರೈತಸಮೂಹ, ಅವರ ಶ್ರಮದ ಫಲಶೃತಿಯ ಹಾಗೂ ವೃತ್ತಿ, ಪ್ರವೃತ್ತಿಗಳನ್ನು ಅರಿಯುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯುತ್ತಲಿವೆ. ಈ ನಿಟ್ಟಿನಲ್ಲಿ ಕ್ರಿಯಾತ್ಮಕ ಜನಪದ ಗೀತೆಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಜಾನಪದ ಕ್ಷೇತ್ರ ವಿಶಾಲವಾದುದು. ಅದರಲ್ಲಿ ಜನಪದ ಗೀತೆಗಳಿಗೆ ಅಗ್ರಸ್ಥಾನವಿದೆ. ಇಂತಹ ಸ್ಥಾನವನ್ನು ತುಂಬುವವರು ವಿಶೇಷವಾಗಿ ಹಳ್ಳಿಯ ಜನರು. ಅದರಲ್ಲೂ ಒಕ್ಕಲು ಮಕ್ಕಳು. ಭಾರತ ದೇಶವು ನೂರಕ್ಕೆ ತೊಂಭತ್ತರಷ್ಟು ಹಳ್ಳಿಗಳಿಂದ ಕೂಡಿದ ದೇಶವಾಗಿದೆ. ಇಲ್ಲಿಯ ಪ್ರಮುಖ ಉದ್ಯೋಗ ಒಕ್ಕಲುತನ. ಕಲ್ಲು, ಮಣ್ಣು ಹೊತ್ತು, ಚಳಿ, ಮಳೆ, ಬಿಸಿಲು, ಗಾಳಿಯೆನ್ನದೆ ಹಗಲಿರುಳೂ ದುಡಿದುಡಿದು ಬೆವರು ಸುರಿಸುವ ಈ ನೇಗಿಲಯೋಗಿ ನಿಜಕ್ಕೂ ಕರ್ಮಯೋಗಿ. ಆತನಿಗೂ ಧರ್ಮ, ನೀತಿಯಿದೆ. ತನ್ನದೇ ಆದ ವಿದ್ಯೆ ಇದೆ. ಶಾಸ್ತ್ರವಿದೆ. ಹೊಲ ಹಸನ ಮಾಡುವ, ಉತ್ತಿ ಬಿತ್ತುವ, ಬಿತ್ತಿ ಕಳೆತೆಗೆದು ಬೆಳೆ ಬೆಳೆವ, ಬೆಳೆ ಕೊಯ್ದು ರಾಸಿ ಮಾಡುವ, ಹಾಗೂ ರಾಸಿ ಮಾಡಿ ಫಲ ಭೋಗಿಸುವ ಒಕ್ಕಲಿಗರ ದುಡಿತದ ಸಂತೋಷಕ್ಕೆ ಪಾರವೇ ಇಲ್ಲ. ಈ ದುಡಿತದ ಪ್ರತಿಯೊಂದು ಸಂದರ್ಭದಲ್ಲೂ ಒಕ್ಕಲಿಗರು ಸುಶ್ರಾವ್ಯವಾಗಿ ಜನಪರ ಹಾಡುಗಳನ್ನು ಹಾಡುತ್ತಿದ್ದರು. ಈಗ ಇಂತಹ ಜನಪದ ಹಾಡುಗಳು ಕೇಳಲಿಕ್ಕೆ ಸಿಗದಂತಾಗಿಬಿಟ್ಟಿದೆ. ಆಧುನಿಕ ಸಂಸ್ಕೃತಿಯ

ದಟ್ಟ ನೆರಳು ಜನಪದ ಸಂಸ್ಕೃತಿಯ ಮೇಲೆ ವಿಶಾಲಗೊಳ್ಳುತ್ತಿದ್ದಂತೆ, ಮಾನವನ ಇಡೀ ಬದುಕನ್ನು ತೆಕ್ಕೆಯಲ್ಲಿ ತುಂಬಿ ತುಳುಕುತ್ತಿದ್ದ ಜನಪದ ಗೀತೆ, ಸಂಪ್ರದಾಯಗಳು ಕ್ರಮೇಣವಾಗಿ ನಶಿಸುತ್ತ ಹೊರಟಿವೆ. ಇದರ ಪರಿಣಾಮವಾಗಿ ನಮ್ಮ ಜನಪದರು ತಮ್ಮ ಬದುಕಿನ ಜೊತೆಗೆ ಪಾರಂಪರಿಕವಾಗಿ ರಕ್ಷಿಸಿಕೊಂಡು ಬಂದಿದ್ದ ಜಾನಪದ ಸಂಪತ್ತು ಅಲಕ್ಷಕ್ಕೆ ಒಳಗಾಗುತ್ತಲಿದೆ. ಒಂದೆಡೆ ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ನಮ್ಮಲ್ಲಿ ಪ್ರವೇಶ ಪಡೆದ ಚಲನಚಿತ್ರ, ದೂರದರ್ಶನ, ಟೇಪರಿಕಾರ್ಡರುಗಳಿಂದ ವರ್ಣರಂಜಿತ ಮನರಂಜನೆಗಳು ಬೇಕಾಬಿಟ್ಟಿಯಾಗಿ ದೊರಕುವುದರಿಂದ ಜನಪದ ಗೀತೆಗಳು, ಕಲೆಗಳು ಅಲಕ್ಷ್ಯಕ್ಕೆ ಗುರಿಯಾಗಿವೆ. ಇನ್ನೊಂದೆಡೆ ತಮ್ಮ ಪೂರ್ವಿಕರು ಕರಗತ ಮಾಡಿಕೊಂಡು ಬಂದಿರುವ ಸಂಪ್ರದಾಯಗಳನ್ನು ಮುಂದುವರಿಸುವುದರಿಂದ ಯಾವ ಲಾಭವಿಲ್ಲವೆಂದು ಭಾವಿಸಿರುವ ಇಂದಿನ ಪೀಳಿಗೆಯವರು ಇಂತಹ ಕಲೆಗಳನ್ನು ಕೈಬಿಡುತ್ತಲಿದ್ದಾರೆ. ಹೀಗೆ ಹಾಳಾಗಿ ಹೊರಟಿರುವ ರೈತ ಸಮೂಹದ ಹಾಡುಗಳಾದ ದುಡಿಮೆ ಅಥವಾ ಶ್ರಮದ ಹಾಡುಗಳ ಸಂಪ್ರದಾಯಗಳ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಜಾನಪದ ಸಂಪ್ರದಾಯ ಸಂಸ್ಕೃತಿಯ ಅಪೂರ್ವ ಆಕರ, ಅಮೂಲ್ಯ ಭಂಡಾರ. ಶಾಬ್ದಿಕ ಮತ್ತು ಅಶಾಬ್ದಿಕ ಜಾನಪದ ತಲಸ್ಪರ್ಶಿ ಅಧ್ಯಯನ ಮತ್ತು ವಿವೇಚನೆಗಳು ಜಾನಪದ ಭಂಡಾರದಲ್ಲಿ ಹುದುಗಿರುವ ವಿರಳವಸ್ತು ಸಂಗತಿಗಳತ್ತ ನಮ್ಮ ಗಮನ ಸೆಳೆದಾಗ, ನಾವು ವ್ಯಾಪಕ ಕ್ಷೇತ್ರಕಾರ್ಯಕ್ಕೆ ಮೊರೆ ಹೋಗುವುದು ಅನಿವಾರ್ಯ. ಆಗ ಜಾನಪದ ಒಂದು ಆನ್ವಯಿಕ ಅಧ್ಯಯನ ಎನ್ನುವ ಸತ್ಯದ ಅನುಭವವಾಗುತ್ತದೆ.

ಒಕ್ಕಲಿಗರಿಗೆ ಸಕಾಲಕ್ಕೆ ಸರಿಯಾಗುವ ಮಳೆಯೂ ಬೇಕು. ಅದಕ್ಕಾಗಿ ಯಾವಾಗಲೂ ಮಳೆರಾಜನನ್ನು ಪ್ರಾರ್ಥಿಸುತ್ತಾರೆ. ಚಳಿ ಬಿಸಿಲು, ಗಾಳಿಗಳೂ ಬೇಕು. ಹೊಲ ಸಾಗು ಮಾಡುವುದಕ್ಕೆ ರಂಟೆ, ಕುಂಟೆ, ನೇಗಿಲ, ಕೊಡ್ಡ, ಕೂರಿಗೆಗಳೂ ಬೇಕು. ಕೈಕೆಲಸಕ್ಕೆಂದು ಕೊಡ್ಲಿ, ಕುಡಗೋಲು, ಕುರಪಿ, ಹಾರಿ, ಗುದ್ದಲಿ, ಸಲಿಕೆ. ಹೀಗೆ ಒಂದೆ ಎರಡೇ. ಹೊಲ ಹದ ಬಂದಾಗ ಬಿತ್ತಲು ಬೀಜ ಬೇಕು. ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಬಹು ಜಾಗರೂಕರಾಗಿ ದುಡಿದಾಗ ಸರಿಯಾದ ಬೆಳೆ ಬರುತ್ತದೆ. ಅಂದಾಗ ಮನೆಗೆ ಕಾಳು ಬಂದು ಬೀಳುತ್ತವೆ. ಇವೆಲ್ಲದರ ಫಲವಾಗಿ ಹೊಟ್ಟೆಗೆ ಹಿಟ್ಟು-ರೊಟ್ಟಿ ದೊರಕುತ್ತವೆ. ಈ ರೀತಿಯ ತಮ್ಮ ಜೀವನಯಾತ್ರೆಯಲ್ಲಿ ಒಕ್ಕಲಿಗರು ಒಂದಿಲ್ಲ ಒಂದು ಪದಕಟ್ಟಿ ಬೇಸರವನ್ನು ಕಳೆಯಲಿಕ್ಕೆ ಹಾಡು ಹೇಳುತ್ತಾರೆ. ಅದಕ್ಕಾಗಿ ಜಾನಪದದ ಸಮಸ್ತ ಜೀವನಕ್ರಮವನ್ನು ತಲಸ್ಪರ್ಶಿಯಾಗಿ, ವೈಜ್ಞಾನಿಕವಾಗಿ ಪರಿಚಯ ಮಾಡಿಕೊಡುವ ಕಾರ್ಯ ಇನ್ನೂ ನಡೆಯಬೇಕಾಗಿದೆ. ಹಾಗೂ ಕೃಷಿಗೆ ಸಂಬಂಧಿಸಿದ ಆಚರಣೆಗಳು, ವೈವಿಧ್ಯತೆಗಳು ಒಟ್ಟಾರೆ ಜನಪದ ಬದುಕಿನ

ಕ್ರಿಯೆ-ಪ್ರಕ್ರಿಯೆಗಳನ್ನು ಸಾಂಸ್ಕೃತಿಕ ತಳಹದಿಯ ಮೇಲೆ ಅಭ್ಯಸಿಸಿ ವೈಜ್ಞಾನಿಕವಾಗಿ ಸಮಗ್ರವಾದ ಅಧ್ಯಯನ ಮಾಡುವುದು ಅಗತ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಜನಪದ ಗೀತೆಗಳ ಅಧ್ಯಯನದ ಮಹತ್ವವನ್ನು ಪಡೆದುಕೊಳ್ಳುತ್ತಿದ್ದು, ಈ ಹಿಂದೆ ಅನೇಕ ಜಾನಪದ ವಿದ್ವಾಂಸರು ಜಾನಪದ ಗೀತೆಗಳ, ಸಂಗ್ರಹ, ಸಂಪಾದನೆ, ಲೇಖನ, ಪ್ರಬಂಧ ಇವುಗಳ ಕಣಜಗಳನ್ನು ಸಮೃದ್ಧಿಯಿಂದ ಬಿತ್ತಿ ಬೆಳೆದಿದ್ದಾರೆ. ಹಲಸಂಗಿ ಗೆಳೆಯರ ಕನ್ನಡದ ಮೊಟ್ಟಮೊದಲ ಜನಪದ ಗೀತೆಗಳ ಸಂಕಲನ 'ಗರತಿ ಹಾಡು' ೧೯೩೧ ರಲ್ಲಿ ಪ್ರಕಟಗೊಂಡಿತು. ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ', 'ಹಳ್ಳಿಯ ಹಾಡು' ಸಿಂಪಿ ಲಿಂಗಣ್ಣ ಮತ್ತು ಪಿ.ಧೂಲಾ ಅವರ 'ಜೀವನ ಸಂಗೀತ', ಕಾಪಸೆ ರೇವಪ್ಪನವರ 'ಮಲ್ಲಿಗೆದಂಡೆ', ಬೆಟಗೇರಿ ಕೃಷ್ಣಶರ್ಮರವರ 'ಜನಪದ ಜೀವನ', 'ಹಳ್ಳಿಯ ಹಾಡುಗಳು' ಇವು ಜಾನಪದ ಅಧ್ಯಯನದ ಮೂಲ ಆಕರಗಳಾಗಿವೆ. ಅಂತೆಯೇ ಜಾನಪದದ ವಿವಿಧ ಮುಖಗಳನ್ನು ವಿಶ್ಲೇಷಿಸುವ ಹಲವಾರು ಮಹಾಪ್ರಬಂಧಗಳಲ್ಲಿ ಡಾ. ಬಿ.ಎಸ್.ಗದ್ದಗಿಮಠ 'ಕನ್ನಡ ಜನಪದ ಗೀತೆಗಳು' ಎಂಬ ಮಹಾಪ್ರಬಂಧವು ಕನ್ನಡ ಜಾನಪದ ಕ್ಷೇತ್ರದ ಮೈಲುಗಲ್ಲಾಗಿದೆ. ಹಾಗೆಯೇ ಜೀಶಂಪರವರ 'ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು' ಮತ್ತು 'ಜನಪದ ಖಂಡಕಾವ್ಯಗಳು', ಡಾ. ಎಚ್.ಎಲ್.ನಾಗೇಗೌಡರ 'ಸೋಬಾನೆ ಚಿಕ್ಕಮ್ಮನ ಪದಗಳು', ಪಂಚಮುಖಿ ಆರ್.ಎಸ್. ಅವರ 'ಕರ್ನಾಟಕ ಜನಪದ ಗೀತೆಗಳು', ಹಾ.ಮಾ.ನಾಯಕರ 'ಧಾರವಾಡ ಜಿಲ್ಲೆಯ ಲಾವಣಿಗಳು', ಎಲ್.ಆರ್.ಹೆಗಡೆಯವರ 'ಕೆಲವು ಲಾವಣಿಗಳು' ಮತ್ತು 'ಪರಮೇಶ್ವರಿ ಪದಗಳು', ಕರಾಕೃ ಅವರ 'ಆಯ್ದ ಜನಪದ ಗೀತೆಗಳು', ಡಿ.ಲಿಂಗಯ್ಯನವರ 'ಬಯಲುಸೀಮೆಯ ಲಾವಣಿಗಳು', ಹನುಮಂತರಾವ ಮೊಹರೆಯವರ '೧೮೫೭ ರ ಲಾವಣಿಗಳು', ದೇ.ಜವರೇಗೌಡರ 'ಜನಪದ ಗೀತಾಂಜಲಿ', ಶಾಲಿನಿ ರಘುನಾಥ ಅವರ 'ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು', ಬಸವರಾಜ ಮಲಶೆಟ್ಟಿಯವರ 'ಕೋಲಾಟದ ಪದಗಳು', ನಿಂಗಣ್ಣ ಸಣ್ಣಕ್ಕಿಯವರ 'ಗಂಡಸರ ಹಾಡುಗಳು', ತೇಜಸ್ವಿ ಕಟ್ಟೀಮನಿಯವರ 'ರಿವಾಯತ್ ಪದಗಳು', ಮತ್ತಿಘಟ್ಟ ಕೃಷ್ಣಮೂರ್ತಿಯವರ 'ನಮ್ಮ ಹಳ್ಳಿಯ ಹಾಡು' ಹಾಗೂ 'ಕರ್ನಾಟಕ ಜನಪದ ಗೀತೆಗಳು', ಎಂ.ಎಸ್.ಲಠ್ಠೆಯವರ 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು', ಮುದೇನೂರು ಸಂಗಣ್ಣ ಅವರ 'ಹಳ್ಳಿಯ ಪದಗಳು', ಕೆ.ವಿ.ಲಿಂಗಪ್ಪನವರ 'ಮಲೆನಾಡಿನ ಜನಪದ ಗೀತೆ', ಕ್ಯಾತನಹಳ್ಳಿ ರಾಮಣ್ಣ ಅವರ 'ಬೀದರ ಜಿಲ್ಲೆಯ ಜನಪದ ಗೀತೆಗಳು', ಎನ್.ಆರ್.ನಾಯಕರ 'ಕಾರವಾರ ಜಿಲ್ಲೆಯ ಜನಪದ ಗೀತೆಗಳು', ನಂ. ತಪಸ್ವೀಕುಮಾರ ಅವರ 'ಕರ್ನಾಟಕ ಜನಪದ ಗೀತೆಗಳ

ಸಾಂಸ್ಕೃತಿಕ ಅಧ್ಯಯನ' ಮುಂತಾದವುಗಳನ್ನು ಹೆಸರಿಸಬಹುದಾಗಿದೆ. ಈ ಕೃತಿಗಳು ಮತ್ತು ಮಹಾಪ್ರಬಂಧಗಳು ಜನಪದ ಗೀತೆಗಳ ಅಧ್ಯಯನದ ಅಗತ್ಯತೆ ಮತ್ತು ಮಹತ್ವಗಳನ್ನು ತಿಳಿಸುವ ಆಳವಾದ ಅಧ್ಯಯನವಾಗಿರುವುದನ್ನು ನಾವು ಕಾಣಬಹುದು. ಹಾಗೂ ಜಾನಪದ ಕ್ರಿಯಾತ್ಮಕ ಜನಪದ ಗೀತೆಗಳ ಕುರಿತಾಗಿ ಈವರೆಗೆ ಯಾವುದೇ ರೀತಿಯ ಅಧ್ಯಯನ ಕಂಡುಬಂದಿರುವದಿಲ್ಲ. ಆ ಕಾರಣದಿಂದಾಗಿ ಪ್ರಸ್ತುತ ಅಧ್ಯಯನಕ್ಕೆ ಮುಖ್ಯ ಪ್ರೇರಣೆಯನ್ನು ನೀಡಿದೆ ಹಾಗೂ ಆ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ನೀಗಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಕ್ರಿಯಾತ್ಮಕ ಜನಪದ ಕಲೆಗಳನ್ನು ವಿದ್ವಾಂಸರು ತಮತಮಗೆ ಸರಿಕಂಡ ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಇನ್ನೂ ಕೆಲವು ವಿದ್ವಾಂಸರು ಧಾರ್ಮಿಕ, ಅರೆಧಾರ್ಮಿಕ, ಲೌಕಿಕ -ಅರೆಲೌಕಿಕ, ವೃತ್ತಿಕಲೆಗಳು, ಮನರಂಜನಾ ಕಲೆಗಳು, ಉಪಯೋಗಿ ಕಲೆಗಳು ಎಂದು ವಿಭಾಗಿಸಿಕೊಂಡಿದ್ದರೆ; ಇನ್ನು ಕೆಲವರು ಗಂಡುಪ್ರಧಾನ, ಹೆಣ್ಣುಪ್ರಧಾನ, ಮಕ್ಕಳುಪ್ರಧಾನ, ಉಭಯಪ್ರಧಾನ ಜನಪದ ಕಲೆಗಳು, ಲಲಿತಕಲೆಗಳು, ಉಪಯುಕ್ತ ಕಲೆಗಳೆಂದು; ಅಭಿನಯ ಸಂಗೀತ ಪ್ರಧಾನ ಕಲೆಗಳು ವೇಷಭೂಷಣ , ಸಂಭಾಷಣೆ, ಪ್ರಧಾನ ಕಲೆಗಳು, ಮಿಶ್ರಕಲೆಗಳು ಎಂದು ವಿಭಜಿಸಿಕೊಂಡು ಅಧ್ಯಯನವನ್ನು ಮಾಡಿದ್ದಾರೆ. ಆದ್ದರಿಂದ ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಜನಪದ ಕ್ರಿಯಾತ್ಮಕ ಗೀತೆಗಳಲ್ಲಿ ಪ್ರಮುಖವಾಗಿ ರೈತನ ಕೆಲಸದೊಂದಿಗಿನ ಹಾಡುಗಳ ಸ್ಥೂಲವಾದ ವಿಂಗಡಣೆಯ ಹಿನ್ನೆಲೆಯಲ್ಲಿ ಕ್ರಿಯಾತ್ಮಕ ಜನಪದ ಗೀತೆಗಳನ್ನು ಪರಿಚಯಿಸಲಾಗಿದೆ.

**ಅಧ್ಯಯನದ ವಿಧಾನ ಹಾಗೂ ವ್ಯಾಪ್ತಿ :**

ಪ್ರಸ್ತುತ ಅಧ್ಯಯನಕ್ಕೆ ಜನಪದ ಗೀತೆಗಳ ಮೇಲೆ ನಡೆದ ಅಧ್ಯಯನದ ಪ್ರಬಂಧಗಳು, ಬಿಡಿಲೇಖನಗಳು ಹಾಗೂ ಪುಸ್ತಕಗಳನ್ನು ಬಳಸಿಕೊಳ್ಳಲಾಗಿದೆ. ಇವುಗಳಿಗಿಂತ ಹೆಚ್ಚಾಗಿ ಅಧ್ಯಯನದ ಜೀವಾಳವೆನಿಸಿರುವ ಕ್ಷೇತ್ರಕಾರ್ಯದಿಂದ, ಅಧ್ಯಯನದ ಅನುಕೂಲಕ್ಕಾಗಿ ಪ್ರಮುಖ ಗ್ರಾಮ, ನಗರಗಳ ರೈತ ಸಮೂಹದ ಅನುಭವಿ ಹಿರಿಯರಿಂದ ಹಾಗೂ ಕಿರಿಯರಿಂದ ವಿಷಯವನ್ನು ಸಂಗ್ರಹ ಮಾಡಿದ್ದೇನೆ.

ಜನಪದ ಕ್ರಿಯಾತ್ಮಕ ಗೀತೆ ಎಂಬ ವಿಷಯವನ್ನು ಪಿಎಚ್.ಡಿ. ಪದವಿಗೆ ಆಯ್ಕೆ ಮಾಡಿಕೊಂಡು ಕ್ಷೇತ್ರಕಾರ್ಯ ಕೈಕೊಂಡಾಗ ಪೂರ್ವಸಿದ್ಧತೆಗೆ ಪ್ರಶ್ನಾವಳಿಯ ಚೌಕಟ್ಟನ್ನು ಹಾಕಿಕೊಂಡು ಆಯ್ಕೆ ಮಾಡಿದ ಪ್ರದೇಶಗಳಲ್ಲಿ ಸಂದರ್ಶನವನ್ನು ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ.

ಹಲವಾರು ವಿಶಿಷ್ಟ ಕ್ರಿಯಾತ್ಮಕ ಬಗೆಗಳಾದ ತೆನೆಮುರಿಯುವುದು, ಗೂಡುಕಟ್ಟುವುದು, ಹಂತಿ ಕಟ್ಟುವುದು, ರಾಶಿ ತೂರುವುದು, ರಾಶಿಪೂಜೆ (ಬೂದನಪೂಜೆ), ಕರಿಬಂಟ ಕಟ್ಟುವದು, ಕಾಶಿ ಒಯ್ಯುವ ಬಗೆ, ಕಳೆ ತೆಗೆಯುವುದು, ಗಳೆ ಹೊಡೆಯುವುದು, ಮೆದಿಗಣಕಿ ಒಯ್ಯುವದು, ಕಂಕಿ ತೆಗೆಯುವುದು ಮತ್ತು ಮಟ್ಟಿ ಹೊಡೆಯುವುದು ಇಂತಹ ನೂರಾರು ವಿವರಗಳನ್ನು ಹಳೆಯ ತಲೆಮಾರಿನ ಹಿರಿಯರಿಂದ ಪಡೆದುಕೊಂಡು, ಛಾಯಾಚಿತ್ರಗಳನ್ನು ಪಡೆಯಲು ಕ್ಯಾಮರಾವನ್ನು ಬಳಸಿಕೊಂಡಿದ್ದೇನೆ. ಕ್ರಿಯಾತ್ಮಕ ಜನಪದ ಗೀತೆಗಳ ಪ್ರಾಚೀನತೆಯ ಬಗೆಗೆ ಇತರ ಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಆಧಾರ ಸಾಮಗ್ರಿಗಳನ್ನು ಈ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕ್ರಿಯಾತ್ಮಕ ಗೀತೆಗಳ ಮೂಲ ಸ್ವರೂಪದ ಬಗೆಗೆ ಒಂದು ಸ್ಪಷ್ಟವಾದ ನಿರ್ಧಾರಕ್ಕೆ ಬರಲು ಪ್ರಯತ್ನಿಸಲಾಗಿದೆ. ಹಾಗೂ ಅಧ್ಯಯನಕ್ಕೆ ಸಾಧ್ಯವಾದಷ್ಟು ಖಚಿತತೆ ಹಾಗೂ ಗಟ್ಟಿತನವನ್ನು ತಂದುಕೊಡಲಾಗಿದೆ.

ಸಂಗ್ರಹಿಸಿದ ವಿಷಯವನ್ನು ಭಿನ್ನ ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡು ವಿಶ್ಲೇಷಿಸುವುದರೊಂದಿಗೆ ನನ್ನದೇ ಆದ ಹೊಸ ವಿಚಾರಗಳನ್ನು ಮೇಳೈಸಿ ಹೇಳಲು ಪ್ರಯತ್ನಿಸಿದ್ದೇನೆ. ಒಟ್ಟಾರೆ ಜನಪದ ಕ್ರಿಯಾತ್ಮಕ ಗೀತೆಗಳ ಕುರಿತಾದ ವಿವರಗಳನ್ನು ಸರಿಯಾದ ನಿಟ್ಟಿನಲ್ಲಿ ವಿವೇಚಿಸಿ ಒಂದು ನಿಲುವಿಗೆ ಬರಲು ಪ್ರಯತ್ನಿಸಲಾಗಿದೆ.

ಉತ್ತರ ಕರ್ನಾಟಕದಲ್ಲಿ ವ್ಯಾಪಕವಾದ ಜಾನಪದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳ ಮೂಲಕ ಸಿದ್ಧಪಡಿಸಲಾದ ಈ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲತೆಗಾಗಿ ಒಟ್ಟು ಏಳು ಅಧ್ಯಾಯಗಳಲ್ಲಿ ರೂಪಿಸಿ ಸಂಬಂಧಿಸಿದ ವಿಷಯಗಳನ್ನು ಆಯಾ ಅಧ್ಯಾಯಗಳಲ್ಲಿ ಸೇರಿಸಿ ವಿವರಣಾತ್ಮಕವಾಗಿ ನಿರೂಪಿಸಲು ಪ್ರಯತ್ನಿಸಲಾಗಿದೆ.

**ಒಂದನೆಯ ಅಧ್ಯಾಯದಲ್ಲಿ** ಜನಪದ ಕ್ರಿಯಾತ್ಮಕ ಗೀತೆಗಳ ಅಧ್ಯಯನ ಪೂರ್ವಪ್ರಯತ್ನಗಳ ವಿವರಗಳೊಂದಿಗೆ ಅಧ್ಯಯನದ ಉದ್ದೇಶ, ವಿಧಾನ ಹಾಗೂ ವ್ಯಾಪ್ತಿಯನ್ನು ಹೇಳಲಾಗಿದೆ.

**ಎರಡನೆಯ ಅಧ್ಯಾಯದಲ್ಲಿ** ಕ್ರಿಯಾತ್ಮಕ ಗೀತೆಗಳ ಹುಟ್ಟು, ಬೆಳವಣಿಗೆಯ ಕುರಿತು ಮೂಲದಲ್ಲಿ ಜನಪದ ಗೀತೆಗಳನ್ನು ರಚಿಸುವ ಮತ್ತು ಹಾಡುವ ವಿಷಯಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಅಭಿವ್ಯಕ್ತಪಡಿಸುವ ಕ್ರಮಬದ್ಧತೆಗಳ ಕುರಿತು ವಿವರಗಳಿವೆ.

**ಮೂರನೆಯ ಅಧ್ಯಾಯದಲ್ಲಿ** ಗಂಡಸರ ಕ್ರಿಯಾತ್ಮಕ ಜನಪದ ಗೀತೆಗಳಿಗೆ ಸಂಬಂಧಪಟ್ಟಗಳೆ ಅಥವಾ ನೇಗಿಲ ಹಾಡುಗಳು, ಬಿತ್ತುವ ಅಥವಾ ನಾಟಿ ಹಾಡುಗಳು, ಮಟ್ಟಿ ಅಥವಾ ಏತದ ಹಾಡುಗಳು, ಸುಗ್ಗಿಯ ಹಾಡುಗಳು. ಇದರಲ್ಲಿ ಬಲೋರಿ ಹಾಡುಗಳು, ಹಂತಿ ಹಾಡುಗಳು, ರಾಶಿ ಹಾಡುಗಳ ಕುರಿತಾಗಿ ಚರ್ಚಿಸಲಾಗಿದೆ.

**ನಾಲ್ಕನೆಯ ಅಧ್ಯಾಯದಲ್ಲಿ** ಹೆಂಗಸರ ಕ್ರಿಯಾತ್ಮಕ ಜನಪದ ಗೀತೆಗಳಿಗೆ ಸಂಬಂಧಿಸಿದ ಬಿತ್ತುವ ಅಥವಾ ನಾಟಿ ಮಾಡುವಾಗಿನ ಹಾಡುಗಳು, ಕಳೆ ಥವಾ ಕಸ ಕೀಳುವಾಗಿನ ಹಾಡುಗಳು, ಸುಗ್ಗಿ ಹಾಡುಗಳು, ಮೆದಿಗಣಕಿ ಸೋಸುವಾಗಿನ ಹಾಡುಗಳು, ರಾಶಿ ಹಾಡುಗಳು, ಕುಟ್ಟುವ ಹಾಗೂ ಬೀಸುವ ಹಾಡುಗಳು ಮತ್ತು ಹಚ್ಚೆ ಹಾಡುಗಳ ಕುರಿತಾಗಿ ಸವಿಸ್ತಾರವಾಗಿ ಚರ್ಚಿಸಲಾಗಿದೆ.

**ಐದನೆಯ ಅಧ್ಯಾಯದಲ್ಲಿ** ಮಕ್ಕಳ ಆಟಗಳಲ್ಲಿ ಕ್ರಿಯಾತ್ಮಕತೆ ಕುರಿತು ಸವಿಸ್ತಾರವಾಗಿ ವಿವರಿಸಲಾಗಿದೆ.

**ಆರನೆಯ ಅಧ್ಯಾಯದಲ್ಲಿ** ಜನಪದ ಗೀತೆಗಳ ಛಂದಸ್ಸು, ಲಯ ಮತ್ತು ಮಟ್ಟಿಗಳ ಕುರಿತು ವಿವರಿಸಲಾಗಿದೆ.

**ಏಳನೆಯ ಅಧ್ಯಾಯ** ಸಮಾರೋಪದಲ್ಲಿ ಅಧ್ಯಯನದ ಫಲಶ್ರುತಿ ಇದೆ. ಇದರೊಂದಿಗೆ ಅನುಬಂಧದಲ್ಲಿ ವಕ್ತೃಗಳ ಮಾಹಿತಿಪಟ್ಟಿ, ಪಾರಿಭಾಷಿಕ ಪದಗಳ ಪಟ್ಟಿ, ಪರಾಮರ್ಶನ ಗ್ರಂಥಗಳ ವಿವರಗಳ ಜೊತೆಗೆ ಅಧ್ಯಯನಕ್ಕೆ ಸಂಬಂಧಪಟ್ಟ ರೇಖಾಚಿತ್ರ, ಛಾಯಾಚಿತ್ರಗಳ ವಿವರವನ್ನು ನೀಡಲಾಗಿದೆ.